**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.1/2022**

**PW. 6**

**CW. 1**

**ಸಾಕ್ಷಿಯ ಹೆಸರು – ಅಮೃತ ಕೆ ಎಸ್**

**ಗಂಡನ ಹೆಸರು – ಮಹದೇವಸ್ವಾಮಿ**

**ವಯಸ್ಸು – 40 ವರ್ಷಗಳು** ದಿನಾಂಕ 30–06–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರಾಯಚೂರು,**

**ವಾಸಸ್ಥಳ – ರಾಯಚೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು 2014 ರಿಂದ 2024 ರವರೆಗೆ ಮೈಸೂರಿನ ಗಣಿ ಮತ್ತು ಭೂ ಇಲಾಖೆಯಲ್ಲಿ ಹಿರಿಯ ಭೂ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದೇನೆ.

ದಿಃ 29–06–2019 ರಂದು ನಾನು ಕಛೇರಿಯಲ್ಲಿದ್ದಾಗ ಪಿರಿಯಾಪಟ್ಟಣ ತಾಲ್ಲೂಕು ಹಾರನಹಳ್ಳಿ ಹೋಬಳಿ ಮುತ್ತಗೂರು ಗ್ರಾಮದ ಸರ್ವೇ ನಂ 7 ರಲ್ಲಿ ಆರೋಪಿಯು ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದಾನೆಂದು ಬಂದ ಮಾಹಿತಿ ಮೇರೆಗೆ ನಾನು , ಚಾಸಾ–2 ರವರು ಇಲಾಖೆ ಜೀಪಿನಲ್ಲಿ ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ಸದರಿ ಜಮೀನಿನ ಬಳಿ ಹೋಗಿ ಸ್ಥಳ ಪರಿಶೀಲನೆ ಮಾಡಲಾಗಿ ಕಲ್ಲು ಹೊಡೆದು ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು , ನಮ್ಮ ವಾಹನವನ್ನು ಅಲ್ಲಿ ಕೆಲಸ ಮಾಡುತ್ತಿದ್ದ ಆಸಾಮಿಗಳು ಅಲ್ಲಿಂದ ಓಡಿ ಹೋದರು. ಸದರಿ ಜಮೀನಿನಲ್ಲಿ ಕಲ್ಲು ಗಣಿಗಾರಿಕೆ ಮಾಡಿ ಕಲ್ಲು ಸಾಗಾಣಿಕೆ ಮಾಡಿರುವ ಮಾಹಿತಿ ತಿಳಿಯಿತು. ವಿಚಾರಿಸಲಾಗಿ ಸದರಿ ಜಮೀನು ಪುರುಷೋತ್ತಮ ಎನ್ನುವವರಿಗೆ ಸೇರಿದ್ದು , ಆರೋಪಿಗೆ ಕಲ್ಲು ಗಣಿಗಾರಿಕೆ ಮಾಡಲು ಕೊಟ್ಟಿದ್ದರು

ಎಂದು ಗೊತ್ತಾಯಿತು. ಸ್ಥಳದಲ್ಲಿದ್ದ ಬ್ಯಾಗ ಅನ್ನು ತೆಗೆದು ನೋಡಲಾಗಿ, ಅದರಲ್ಲಿ ವೈರ್, ಟ್ಯೂಬ್ಗಳು, 3 ನೊಟೊರಿನೆಟೆಡ್ ಕ್ಯಾಪ್ಸ್ ಸ್ಫೋಟಕ ವಸ್ತುಗಳು ಮತ್ತು ಕಲ್ಲು ಹೊಡೆಯಲು ಬೇಕಿರುವ ಸಾಮಾನುಗಳು ಇದ್ದವು. ಸ್ಥಳವನ್ನು ಪರಿಶೀಲಿಸಲಾಗಿ ಅಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಯುತ್ತಿತ್ತು. ಸದರಿ ಕೃತ್ಯದಿಂದ ಪರಿಸರಕ್ಕೆ ಹಾನಿ ಮತ್ತು ಮಾನವ ಜೀವಕ್ಕೆ ಹಾನಿಯಾಗುವ ಕೃತ್ಯವನ್ನು ಆರೋಪಿ ಮಾಡುತ್ತಿದ್ದ ಎಂದು ಗೊತ್ತಾಯಿತು.

ಸ್ಥಳದಲ್ಲಿ ವಸ್ತುಗಳನ್ನು ನಮ್ಮ ವಶಕ್ಕೆ ಪಡೆದು, ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಠಾಣೆಯಲ್ಲಿ ಸದರಿ ವಸ್ತುಗಳನ್ನು ನಮ್ಮ ಸಮಕ್ಷಮ ಜಪ್ತಿ ಮಾಡಿ , ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಸ್ಥಳದಲ್ಲಿ ನಾವು ವಶಪಡೆದ ವಸ್ತುಗಳನ್ನು ನಿಪಿ-1 ರ ಫೋಟೋದಲ್ಲಿ ನೋಡಿ ಗುರುತಿಸಿರುತ್ತೇನೆ. ನಂತರ ನಾನು ಪೊಲೀಸರೊಂದಿಗೆ ಸ್ಥಳಕ್ಕೆ ಹೋಗಿ, ಸ್ಥಳದಲ್ಲಿ ಪೊಲೀಸರು ಪಂಚರ ಸಮಕ್ಷಮ ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಕಲ್ಲುಗಳನ್ನು ಸ್ಫೋಟಿಸಲು ಸೂಕ್ತ ತಜ್ಞರಿಂದ ಮಾಡಿಸುವುದು ಸೂಕ್ತವಾಗಿರುತ್ತದೆ.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಕೆ ಸಿ ಬಿ ವಕೀಲರಿಂದಃ-**

ಮೇಲೆ ಹೇಳಿದ ಜಮೀನಿನಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದ ಬಗೆ ಲಿಖಿತ ಮತ್ತು ಮೌಖಿಕವಾಗಿ ದೂರು ಬಂದಿದ್ದವು. ದಿನಾಂಕ ನನಗೆ ಹೇಳಲು ಬರುವುದಿಲ್ಲ. ಸಾರ್ವಜನಿಕರಿಂದ ಬಂದ ದೂರಿನ ಮೇರೆಗೆ ನಿಪಿ-6 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ . ಸರ್ವೇ ನಂ 78 ರಲ್ಲಿ

ಯಾವುದೇ ಬೆಳೆ ಇರಲಿಲ್ಲ. ಕಲ್ಲು ಹೊಡೆಯಲು ಮಾತ್ರ ಉಪಯೋಗಿಸುತ್ತಿದ್ದರು. ಸದರಿ ಜಮೀನು ಅಂದಾಜು 2 ಎಕರೆ ಇರಬಹುದು. ಸದರಿ ಜಮೀನಿನ ಕೆಲವು ಭಾಗಗಳಲ್ಲಿ ಗಣಿಗಾರಿಕೆ ಮಾಡಲಾಗುತ್ತಿತ್ತು. ಆರೋಪಿಯು ಸದರಿ ಜಮೀನಿನಲ್ಲಿ ಗಣಿಗಾರಿಕೆ ಮಾಡುತ್ತಿದ್ದ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರು ಮಾಹಿತಿ ನೀಡಿದ್ದರೂ, ಅವರ ಹೆಸರುಗಳು ನನಗೆ ಗೊತ್ತಿಲ್ಲ. ಆರೋಪಿಯ ಹೆಸರು ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ . ಕಂದಾಯ ಇಲಾಖೆಯ ನೌಕರರು ನೀಡಿದ ಮಾಹಿತಿ ಮೇರೆಗೆ ಸರ್ವೆ ನಂ 7 ರ ಜಮೀನಿನು ಪುರುಷೋತ್ತಮನಿಗೆ ಸೇರಿದ್ದು ಎಂದು ಗೊತ್ತಾಯಿತು.

ಆ ದಿನ ಸಂಜೆ 5.00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿದ್ದೇನೆ. ಪಂಚನಾಮೆ ಬರೆದ ಸಮಯ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಗಳಿಗೆ ಬೇರೆ ಯಾರು ಸಹಿ ಮಾಡಿದ್ದಾರೆ ನನಗೆ ಹೇಳಲು ಬರುವುದಿಲ್ಲ. ಆರೋಪಿ ಯಾವುದೇ ಕಲ್ಲು ಗಣಿಗಾರಿಕೆ ನಡೆಸದಿದ್ದರೂ ಕೂಡ ಆತನ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ–2 ಮತ್ತು 3 ರ ಪಂಚನಾಮೆಗಳನ್ನು ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 7 ರ ಜಮೀನಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡ ಆರೋಪಿಯ ವಿರುದ್ಧ  ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–3 ರ ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**SC No.1/2022**
**PW.6**

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.